JULY 22, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**1. ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ, 1923 ರ ಜೂನ್‌ನಲ್ಲಿ, ಬಾಂಬೆ ರೇಡಿಯೊ ಕ್ಲಬ್‌ನಿಂದ, ಪ್ರಥಮ ಬಾನುಲಿ ಪ್ರಸಾರ ಸೇವೆ, ಪ್ರಾರಂಭವಾಯಿತು. ಮುಂದೆ 1927ರ ಜುಲೈ 23 ರಂದು, ಇಂಡಿಯನ್ ಬ್ರಾಡ್‌ಕಾಸ್ಟಿಂಗ್ ಕಂಪೆನಿ ಸ್ಥಾಪನೆ ಆಯಿತು. 8ನೇ ಜೂನ್, 1936ರಲ್ಲಿ ಆಲ್ ಇಂಡಿಯಾ ರೇಡಿಯೋ ಆಕಾಶವಾಣಿ, ಪ್ರಸಾರ ಸೇವೆ ಆರಂಭಿಸಿ, ಇದೀಗ ಸಾರ್ಥಕ 90 ವರ್ಷಗಳು.**

<><><>

**'ಬಹುಜನ ಹಿತಾಯ, ಬಹುಜನ ಸುಖಾಯ' ಧ್ಯೇಯದೊಂದಿಗೆ, ಆಕಾಶವಾಣಿ, ಜುಲೈ 23ನ್ನು, ರಾಷ್ಟ್ರೀಯ ಪ್ರಸಾರ ದಿನವನ್ನಾಗಿ ಆಚರಿಸುತ್ತದೆ. ಸುದ್ದಿ, ಮಾಹಿತಿ, ಮನೋರಂಜನೆಯೊಂದಿಗೆ, ಸಮಷ್ಟಿಹಿತದ ಕಾಯಕದಲ್ಲಿ ಆಕಾಶವಾಣಿ ತೊಡಗಿದೆ. ಸಾರ್ವಜನಿಕ ಹಿತದ ರಾಷ್ಟ್ರೀಯ ಪ್ರಸಾರ ಮಾಧ್ಯಮವಾಗಿದೆ.**

<><><>

**ನಾಳೆ, ರಾಷ್ಟ್ರೀಯ ಪ್ರಸಾರ ದಿನವನ್ನು, ಆಕಾಶವಾಣಿ ಅರ್ಥಪೂರ್ಣವಾಗಿ, ವಿಶೇಷ ಕಾರ್ಯಕ್ರಮಗಳೊಂದಿಗೆ, ಆಚರಿಸಲಿದೆ.**

<><><>

**2. ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದ ದಿಗ್ಗಜ, ಪಂಡಿತ ಬಸವರಾಜ ರಾಜಗುರು ಅವರ, 34ನೇ ಪುಣ್ಯ ಸ್ಮರಣೆ ಹಿನ್ನೆಲೆ, ಧಾರವಾಡ ಹೊಸಯಲ್ಲಾಪುರದ ಸ್ಮಾರಕದಲ್ಲಿ, ರಾಜಗುರು ಟ್ರಸ್ಟ್ ಅಧ್ಯಕ್ಷ, ಚಂದ್ರಕಾಂತ ಬೆಲ್ಲದ ಹಾಗೂ ಗಣ್ಯರು ಗೌರವಾರ್ಪಿಸಿದರು.**

<><><>

**3. ಬಳ್ಳಾರಿ ಗ್ರಾಮೀಣ ಕ್ಷೇತ್ರದ, ಪರಿಶಿಷ್ಟ ವರ್ಗದ 150 ಜನ ಫಲಾನುಭವಿಗಳಿಗೆ, ಮಹರ್ಷಿ ವಾಲ್ಮೀಕಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ, ಶಾಸಕ ಬಿ.ನಾಗೇಂದ್ರ ದ್ವಿಚಕ್ರ ವಾಹನ, ವಿತರಿಸಿದರು.**

<><><>

**4. 8ನೇ ಮೈಸೂರು ವಿಜ್ಞಾನ ನಾಟಕೋತ್ಸವ, ಗುರುವಾರ 24 ರಿಂದ 27ರ ವರೆಗೆ, ನಾಲ್ಕು ದಿನಗಳ ಕಾಲ, ರಾಮಕೃಷ್ಣ ನಗರದ, ರಮಾಗೋವಿಂದ ರಂಗಮಂದಿರದಲ್ಲಿ ಸಂಜೆ, 4.30 ರಿಂದ ಆಯೋಜಿತವಾಗಿದೆ. ಭಾರತೀಯ ಖಗೋಳ ಭೌತಶಾಸ್ತ್ರ ಸಂಸ್ಥೆ ಹಾಗೂ ಸರಗೂರಿನ, ಸ್ವಾಮಿ ವಿವೇಕಾನಂದ ಯುತ್ ಮೂವ್ಮೆಂಟ್ ಸಂಸ್ಥೆ, 4 ವಿಜ್ಞಾನ ನಾಟಕಗಳ ಪ್ರದರ್ಶನಕ್ಕೆ ಸಹಕಾರ ನೀಡಿವೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಕುತೂಹಲಿ ಕನ್ನಡ ಸಮಗ್ರ ವಿಜ್ಞಾನ ಪತ್ರಿಕೆ ಸಂಪಾದಕ, ಕೊಳ್ಳೇಗಾಲ ಶರ್ಮಾ.**

<><><>

ಕೊಳ್ಳೇಗಾಲ ಶರ್ಮಾ ಧ್ವನಿ 43 ಸೆಕೆಂದುಗಳು

<><><>

5. ಧಾರವಾಡ, ಕರ್ನಾಟಕ ವಿದ್ಯಾವರ್ಧಕ ಸಂಘದ, 136ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ, ಇಂದು ಸಂಜೆ 5.30ಕ್ಕೆ, ಪಾಟೀಲ ಪುಟ್ಟಪ್ಪ ಸಭಾ ಭವನದಲ್ಲಿ, ಶ್ರೀನಿವಾಸ ವೈದ್ಯರ ಕಥೆ ಆಧಾರಿತ, 'ಬಾಸಿಂಗ ಬಲ' ನಾಟಕ ಪ್ರದರ್ಶನ ಜರುಗಲಿದೆ.

<><><>

6. ತಮ್ಮ ತಾಯಿ, ಲಿಂಗೈಕ್ಯ ಶ್ರೀಮತಿ ಗುರಮ್ಮ ಶಿವಲಿಂಗಪ್ಪ ಹೊರಟ್ಟಿ ಅವರ ನೆನಪಿನಲ್ಲಿ, ಕಳೆದ 15 ವರ್ಷಗಳಿಂದ, ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ, ಅವ್ವ ಸೇವಾ ಟ್ರಸ್ಟ್ ಮೂಲಕ, ಅನೇಕ ಸಮಾಜಮುಖಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ ಎಂದು, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದ್ದಾರೆ. ಧಾರವಾಡದ, ಕರ್ನಾಟಕ ವಿಶ್ವವಿದ್ಯಾಲಯ ಆವರಣದ, ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ, ಮಾತೋಶ್ರೀ ಗುರಮ್ಮ ಶಿವಲಿಂಗಪ್ಪ ಹೊರಟ್ಟಿ ದತ್ತಿ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು. ಶ್ರದ್ಧೆ ಹಾಗೂ ಸಮರ್ಪಣೆಯಿಂದ, ಯಾವುದೇ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಸಾಧ್ಯ ಎಂದರು.

<><><>

7. ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ, ವಿಶ್ರಾಂತ ಉಪ ಕುಲಪತಿ, ಎಂ.ಕೆ.ರಮೇಶ, ಹೊಸ ದಿಲ್ಲಿಯ ರಾಷ್ಟ್ರೀಯ ವೈದ್ಯಕೀಯ ಆಯೋಗದ, ವೈದ್ಯಕೀಯ ಮೌಲ್ಯಮಾಪನ ಮಂಡಳಿ ನೂತನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

<><><>

8. ಕೇಂದ್ರ ಪುರಸ್ಕೃತ, ಜಲ ಜೀವನ ಮಿಷನ್ ಹಾಗೂ ಜಲಧಾರೆ ಕಾಮಗಾರಿಗಳ ಪ್ರಗತಿಯನ್ನು, ಯಾದಗಿರಿ ಜಿಲ್ಲಾ ಪಂಚಾಯ್ತಿ ಸಿ.ಇ.ಓ., ಲವೀಶ ಒರಡಿಯಾ ಪರಿಶೀಲಿಸಿದರು. ಹುಣಸಗಿ ತಾಲೂಕು, ದ್ಯಾಮನಹಾಳ, ರಾಜವಾಳ ಗ್ರಾಮಗಳಲ್ಲಿ ಕೈಗೊಳ್ಳಲಾಗಿರುವ, ಜಲ ಜೀವನ್ ಮಿಷನ್ ಕಾಮಗಾರಿಗಳನ್ನು, ಗುಣಮಟ್ಟದೊಂದಿಗೆ ಕಾಲಮಿತಿಯಲ್ಲಿ, ಪೂರ್ಣಗೊಳಿಸುವಂತೆ, ಅಧಿಕಾರಿಗಳಿಗೆ ನಿರ್ದೇಶಿಸಿದರು.

<><><>

9. ಕೇಂದ್ರ ಸರ್ಕಾರ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮಹಿಳಾ ಉದ್ದಿಮೆದಾರರನ್ನು ಉತ್ತೇಜಿಸಲು, ಜಾರಿಗೊಳಿಸಿದ, 'ಸ್ಟ್ಯಾಂಡ್ ಅಪ್ ಇಂಡಿಯಾ' ಯೋಜನೆಯ ಸದುಪಯೋಗದಲ್ಲಿ ಕರ್ನಾಟಕ ದೇಶದಲ್ಲಿಯೇ ಮುಂಚೂಣಿಯಲ್ಲಿದೆ. 2018 ರಿಂದ ಈಚೆಗೆ, ಒಟ್ಟು 2 ಸಾವಿರದ 946 ಕೋಟಿ ರೂಪಾಯಿ, ಸಾಲ ಮಂಜೂರು ಮಾಡಲಾಗಿದೆ. ದಕ್ಷಿಣಕನ್ನಡ ಸಂಸದ ಬ್ರಿಜೇಶ್ ಚೌಟ ಅವರು, ಲೋಕಸಭೆಯಲ್ಲಿ ಕೇಳಿದ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ, ಹಣಕಾಸು ಖಾತೆ ರಾಜ್ಯ ಸಚಿವ, ಪಂಕಜ್ ಚೌಧರಿ ಲಿಖಿತ ಉತ್ತರ ನೀಡಿದ್ದಾರೆ.

<><><>

10. ಧಾರವಾಡ ಜಿಲ್ಲೆಯಲ್ಲಿ ಕಾಣೆಯಾಗಿರುವ ಮಕ್ಕಳ ಪತ್ತೆ ಹಾಗೂ ರಕ್ಷಣೆಗೆ, ವಿವಿಧ ಇಲಾಖೆಗಳ ಸಹಯೋಗದಲ್ಲಿ, ಆದ್ಯತೆ ನೀಡಲಾಗಿದೆ ಎಂದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ ತಿಳಿಸಿದ್ದಾರೆ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಆಯೋಜಿಸಿದ್ದ, ಸಭೆಯಲ್ಲಿ ಅವರು ಮಾತನಾಡಿದರು. ಧಾರವಾಡ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ, ಒಟ್ಟು 7 ಮಕ್ಕಳು ಕಾಣೆಯಾದ ಪ್ರಕರಣ ದಾಖಲಾಗಿವೆ ಎಂದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ. ಹರ್ಷ.